NAME OF THE NEWS PAPER: / DATE :

ಕೋರ್ಟ್‌ಗಳಿಂದ ಬರುವ ನೋಟಿಸ್‌ಗಳಿಗೆ ನಿರ್ಲಕ್ಷ್ಯ | ಅಧಿಕಾರಿಗಳ ಬಂಧನಕ್ಕೆ ಬಂದಾಗಲೇ ಸಿಬ್ಬಂದಿಗಳು ಎಚ್ಚರ

# ಉನ್ನತಾಧಿಕಾರಿಗಳಿಗೆ ಮುಜುಗರ ತಂದ ಸಚಿವಾಲಯ ಸಿಬ್ಬಂದಿ ಆಲಸಿತನ

**ಶಶಿಧರ ಹೆಗಡೆ** ಬೆಂಗಳೂರು
shashidhar.nandikal@timesgroup.com

ಸಚಿವಾಲಯದ ಸಿಬ್ಬಂದಿಯ ಆಲಸಿತನದ ಧೋರಣೆಯಿಂದ ನಾನಾ ಇಲಾಖೆಯ ಉನ್ನತಾಧಿಕಾರಿಗಳು ಕೋರ್ಟ್ ಕಟಕಟೆಯಲ್ಲಿ ನಿಂತು ತಲೆತಗ್ಗಿಸುವುದು ಸಾಮಾನ್ಯ ಎಂಬಂತಾಗಿಬಿಟ್ಟಿದೆ. ಕೋರ್ಟ್‌ನಿಂದ ಬರುವ ನೋಟಿಸ್ ಬಗ್ಗೆ ಕೆಳಹಂತದ ಸಿಬ್ಬಂದಿಗಳು ಸಕಾಲಕ್ಕೆ ಮಾಹಿತಿ ನೀಡದಿರುವುದರಿಂದ ಪದೇ ಪದೆ ಇಂಥ ಮುಜುಗರದ ಸನ್ನಿವೇಶ ಎದುರಾಗುತ್ತಿದೆ.

ಈ ಹಿಂದೆ 1995ರಲ್ಲಿ ಕೋರ್ಟ್ ಆದೇಶ ಪಾಲಿಸದ್ದರಿಂದ . ಪ್ರಧಾನ ಕಾರ್ಯದರ್ಶಿ ಹುದ್ದೆಯಲ್ಲಿದ್ದ ಐಎಎಸ್ ಅಧಿಕಾರಿಯೊಬ್ಬರು 1 ತಿಂಗಳ ಕಾಲ ಜೈಲು ಶಿಕ್ಷೆ ಅನುಭವಿಸಿದ್ದರು. ಈ ಹಿರಿಯ ಅಧಿಕಾರಿಯ ಇಲಾಖೆಯ ಉಪ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿಗಳು ಕೋರ್ಟ್‌ನಿಂದ ಬಂದ ಸೂಚನೆಯನ್ನು ನಿರ್ಲಕ್ಷಿಸಿದ್ದರು. ಪರಿಣಾಮ ಇಲಾಖೆ ಮುಖ್ಯಸ್ಥರು ನ್ಯಾಯಾಲಯದಿಂದ ಛೀಮಾರಿಗೆ ಒಳಗಾಗಿ ಜೈಲು ಪಾಲಾಗಿದ್ದರು.

ಈ ಹಿನ್ನೆಲೆಯಲ್ಲಿ ಸುಪ್ರೀಂ, ಹೈಕೋರ್ಟ್, ಆಡಳಿತ ನ್ಯಾಯಮಂಡಳಿ(ಕೆಎಟಿ) ಸೇರಿದಂತೆ ನಾನಾ ನ್ಯಾಯಾಲಗಳಿಂದ ಬರುವ ನಿರ್ದೇಶನ ಇತ್ಯರ್ಥಕ್ಕೆ ತಕ್ಷಣ ಕ್ರಮ ವಹಿಸುವಂತೆ ಸರಕಾರ ಕಟ್ಟುನಿಟ್ಟಿನ ಸೂಚನೆ ನೀಡಿತ್ತು. ಆದಾದ ಬಳಿಕವೂ ಹತ್ತಾರು ಬಾರಿ ನೆನಪೋಲೆ ಹೊರಡಿಸಲಾಗಿದೆ. ಈ ನಡುವೆಯೂ ಸಚಿವಾಲಯದ ಸಿಬ್ಬಂದಿಯ ಕಾರ್ಯವೈಖರಿಯಲ್ಲಿ ಸುಧಾರಣೆಯಾಗಿಲ್ಲ.

ಸಚಿವಾಲಯದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೇ (ಡಿಪಿಎಆರ್) ಇಂಥ ವಿಚಾರದಲ್ಲಿ ಹೆಚ್ಚಿನ ಹೊಣೆಗಾರಿಕೆ ಇರುತ್ತದೆ. ಆದರೆ, ಡಿಪಿಎಆರ್‌ನ ಹಿರಿಯ ಅಧಿಕಾರಿಯೊಬ್ಬರು ಇತ್ತೀಚೆಗೆ ಹೈಕೋರ್ಟ್‌ನ ಕಲಬುರ್ಗಿ ಪೀಠದಲ್ಲಿ ಬೇಷರತ್ ಕ್ಷಮೆಯಾಚಿಸಿದ್ದಾರೆ. ಹಾಗೆಯೇ ಲೋಕೋಪಯೋಗಿ ಇಲಾಖೆಯ ಉನ್ನತಾಧಿಕಾರಿಯೂ ಕ್ಷಮೆಯಾಚಿಸಿ ಬಂದಿದ್ದಾರೆ.

**ಪೊಲೀಸರು ಬಂದಾಗ್ಲೇ ಗೊತ್ತಾಯ್ತು!**

ಹೈಕೋರ್ಟ್ ಪೀಠದ ಆದೇಶ ಪಾಲನೆ ಮಾಡಿದ್ದರ ಬಗ್ಗೆ ವಿವರ ಒದಗಿಸುವಂತೆ ಸಂಬಂಧಿಸಿದ ಇಲಾಖೆಗೆ ಸೂಚನೆ ಕಳುಹಿಸಲಾಗಿತ್ತು. ಇದಕ್ಕೆ ಉತ್ತರ ಬಾರದ್ದರಿಂದ ನ್ಯಾಯಪೀಠದಿಂದ ಪುನಃ ಪತ್ರ ಬರೆಯಲಾಯಿತು. ಅದಕ್ಕೂ ಪ್ರತಿಕ್ರಿಯೆ ಇಲ್ಲದ್ದರಿಂದ ನೋಟಿಸ್ ಜಾರಿ ಮಾಡಲಾಯಿತು. ನಂತರ ನಿರ್ದಿಷ್ಟ ದಿನ ಕೋರ್ಟ್‌ಗೆ ಅಧಿಕಾರಿ ಹಾಜರಾಗಬೇಕೆಂದು ಮತ್ತೊಂದು ನೋಟಿಸ್ ತಲುಪಿಸಲಾಯಿತು. ಆದರೆ, ವಿಚಾರಣೆ ದಿನ ಅಧಿಕಾರಿ ಹಾಜರಾಗಲೇ ಇಲ್ಲ. ಕೋರ್ಟ್‌ನಿಂದ ಅಂತಿಮವಾಗಿ ಈ ಅಧಿಕಾರಿಯ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಹೊರಡಿಸಲಾಯಿತು. ಹಾಗಾಗಿ ಉನ್ನತಾಧಿಕಾರಿಯನ್ನು ಅರೆಸ್ಟ್ ಮಾಡಲು ಪೊಲೀಸರು ಅವರು ಕಚೇರಿಗೆ ಹೋದರು.

"ನಿಮ್ಮ ಸಾಹೇಬರು ಎಲ್ಲಿ? ಅವರನ್ನು ತಕ್ಷಣವೇ ಕಾಣಬೇಕು," ಎಂದು ಪೊಲೀಸರೇ ಹೇಳಿದಾಗ ಕೆಳ ಸಿಬ್ಬಂದಿಗಳು ನಿರ್ಭಾವುಕರಾಗಿಯೇ ಯಾಕೆ? ಎಂದು ಪ್ರಶ್ನಿಸುತ್ತಾರೆ. "ನಿಮ್ಮ ಸಾಹೇಬರನ್ನು ಅರೆಸ್ಟ್ ಮಾಡಲು ಜಾಮೀನು ರಹಿತ ವಾರಂಟ್ ಇದೆ. ಅದಕ್ಕಾಗಿ ಬಂದಿದ್ದೇವೆ," ಎಂದಾಗ ಸಚಿವಾಲಯದ ಜಡಭರತ ಸಿಬ್ಬಂದಿಗಳು ಗಾಬರಿಯಾಗುತ್ತಾರೆ. ಈ ಸಂದರ್ಭದಲ್ಲಿ ಜಾಮೀನು ರಹಿತ ಬಂಧನದ ವಾರಂಟ್ ಬಲೆಯಲ್ಲಿ ಸಿಲುಕಿದ ಅಧಿಕಾರಿ ವಿಧಾನಸೌಧದ ಮತ್ತೊಂದು ಕೊಠಡಿಯಲ್ಲಿ ಮುಖ್ಯ ಕಾರ್ಯದರ್ಶಿ ಅವರೊಂದಿಗೆ ಸಭೆಯಲ್ಲಿರುತ್ತಾರೆ. ಪೊಲೀಸರು ವಿಧಿಯಿಲ್ಲದೇ ಅಲ್ಲಿಗೆ ತೆರಳಿ ಈ ಅಧಿಕಾರಿಗೆ ತಾವು ಬಂದ ಕಾರಣವನ್ನು ತಿಳಿಸುತ್ತಾರೆ. ನಂತರ ನೇರವಾಗಿ ಕೋರ್ಟ್‌ಗೆ ಹೋದ ಅಧಿಕಾರಿ ಬೇಷರತ್ ಕ್ಷಮೆಯಾಚಿಸಿ ತಪ್ಪೊಪ್ಪಿಗೆ ಪತ್ರ ಬರೆದು ಕೊಡುತ್ತಾರೆ. ಕೋರ್ಟ್ ಆದೇಶ ಪಾಲಿಸುವಂತೆ ಪತ್ರ ಬರೆದದ್ದು ಮೇಲಿಂದ ಮೇಲೆ ನೋಟಿಸ್ ಜಾರಿ ಮಾಡಿದ್ದು ಹಾಗೂ ಬಂಧನದ ವಾರಂಟ್ ಹೊರಡಿಸಿದ್ದರ ಬಗ್ಗೆ ನ್ಯಾಯಾಲಯದಲ್ಲಿ ತಿಳಿಸಿದಾಗಲೇ ಈ ಅಧಿಕಾರಿಗೆ ಗೊತ್ತಾಗುತ್ತದೆ! ಅಂದರೆ ಕೋರ್ಟ್‌ನಿಂದ ಬಂದ ಯಾವುದೇ ಪತ್ರವನ್ನೂ ಕೆಳಹಂತದ ಸಿಬ್ಬಂದಿಗಳು ತೆಗೆದು ನೋಡುವ ಗೋಜಿಗೂ ಹೋಗಿರಲಿಲ್ಲ. ಇದು ಕಚೇರಿಗೆ ಬಂದು ಕಾಲಹರಣ ಮಾಡಿ ಹೋಗುವ ಸಚಿವಾಲಯದ ಸಿಬ್ಬಂದಿಗಳ ಕಾರ್ಯವೈಖರಿಗೆ ಸಾಕ್ಷಿ ಎನ್ನುವಂತಿದೆ.



## ಪ್ರತಿ ತಿಂಗಳು ಪರಿಶೀಲನೆ

**ಇಂಥ ಪ್ರಕರಣ ಮರುಕಳಿಸುತ್ತಿರುವುದರಿಂದ ಪ್ರತಿ ತಿಂಗಳೂ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಪರಿಶೀಲನೆ ನಡೆಸಬೇಕು. ಇದನ್ನು ಫಾಲೋಅಪ್ ಮಾಡಲು ಎಲ್ಲ ಇಲಾಖೆಗಳಲ್ಲಿ ಕಟ್ಟುನಿಟ್ಟು ಕ್ರಮ ಕೈಗೊಳ್ಳಬೇಕು ಎಂದು ಸರಕಾರದಿಂದ ಸೂಚನೆ ನೀಡಲಾಗಿದೆ.**

**ಈ ಪ್ರಕರಣದ ಹಿನ್ನೆಲೆಯಲ್ಲಿ ಸಂಬಂಧಿಸಿದ ಸಿಬ್ಬಂದಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಹಾಗೆಯೇ ತಿಂಗಳಿಗೊಮ್ಮೆ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಪರಾಮರ್ಶೆ ನಡೆಸುವಂತೆ ಎಲ್ಲ ಇಲಾಖೆ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ.**

**-ವಿಜಯ ಭಾಸ್ಕರ್** ಮುಖ್ಯ ಕಾರ್ಯದರ್ಶಿ